# ಭಾರತದಲ್ಲಿ ಸ್ಥಳೀಯ ಆಡಳಿತ ಮತ್ತು ಮಾಹಿತಿ ಹಕ್ಕು ಕಾಯ್ದೆ

**ಜ್ಯೋತಿ ಎಮ್.ಆರ್.*** & **ಜಾಹ್ನವಿ ಎಸ್.ಎಸ್.****

**DOI: https://doi.org/10.5281/zenodo.22300169**

**ABSTRACT**

ಭಾರತದಂತಹ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಪ್ರಾಚೀನ ಕಾಲದ ಪಂಚಾಯತ್ ರಾಜ್ ಸಂಸ್ಥೆಗಳ ರಚನೆ, ಅಧಿಕಾರ, ಆಡಳಿತವೆಲ್ಲವೂ ಗ್ರಾಮಗಳಿಂದ ಆಯ್ಕೆಯಾದ ಹಿರಿಯ ಮುಖಂಡರುಗಳನ್ನು ಅವಲಂಬಿಸಿತ್ತು. ಋಗ್ವೇದ ಕಾಲದಲ್ಲಿ ಜನ್ಮ (ಹಳ್ಳಿಗಳು) ವಿಷ (ಬ್ಲಾಕ್) ಮತ್ತು ಜ್ಞಾನಷ್ ಎಂಬ ವಿವಿಧ ಹೆಸರುಗಳಿಂದ ಕರೆಯಲಾಗುತ್ತಿದ್ದು, ಗ್ರಾಮವು ಆಡಳಿತದ ಪ್ರಮುಖ ಕೇಂದ್ರಬಿಂದುವಾಗಿತ್ತು. ಗ್ರಾಮದ ಮುಖ್ಯಸ್ಥನ ನಿರ್ದೇಶನ ಮತ್ತು ಆತನ ನಿಯಂತ್ರಣದಲ್ಲಿಯೂ ಇಡೀ ಗ್ರಾಮದ ಆಡಳಿತ ನಡೆಯುತ್ತಲಿದ್ದು, ಗ್ರಾಮದ ಉಸ್ತುವಾರಿ ನಡೆಸುವುದು, ಸೈನ್ಯದ ನಿರ್ವಹಣೆ, ಸರ್ಕಾರದ ತೆರಿಗೆಯನ್ನು ಸಂಗ್ರಹಿಸುವುದು, ಅಗತ್ಯ ದಾಖಲೆಗಳನ್ನು ರಕ್ಷಿಸುವ ಕಾರ್ಯಗಳನ್ನು ನಿರ್ವಹಿಸಲಾಗುತ್ತಿತ್ತು. ಆದರೆ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಸ್ಥಳೀಯ ಜನರಿಗೂ ಆದ್ಯತೆ ನೀಡಿ, ಎಲ್ಲರೂ ಆಡಳಿತದಲ್ಲಿ ಭಾಗವಹಿಸುವಂತಾಗಲು ಮತ್ತು ಸ್ಥಳೀಯ ಆಡಳಿತದ ಬಗ್ಗೆ ಅರಿವನ್ನು ಪಡೆದುಕೊಳ್ಳುವ ಸಲುವಾಗಿ ಸಂವಿಧಾನದಲ್ಲಿ ಸೂಕ್ತ ಅವಕಾಶವನ್ನು ಕಲ್ಪಿಸಲಾಯಿತು. ಹಾಗೆಯೇ ಅಧಿಕಾರ ವಿಕೇಂದ್ರೀಕರಣ ತತ್ವದ ಪರಿಣಾಮಕಾರಿ ಅನುಷ್ಠಾನದಿಂದಾಗಿ ಇಂದು ಎಲ್ಲರೂ ಸ್ಥಳೀಯ ಆಡಳಿತದಲ್ಲಿ ತಮ್ಮದೇ ಆದ ಭಾಗವಹಿಸುವಿಕೆಯನ್ನು ಕಾಣಲು ಸಾಧ್ಯವಾಗಿದೆ. ಸ್ಥಳೀಯ ಆಡಳಿತದಲ್ಲಿ ನಾಗರೀಕರಿಗೆ ಸುಲಭವಾಗಿ ಮಾಹಿತಿ ದೊರೆಯುವಂತೆ ಮಾಡುವುದು, ಭ್ರಷ್ಟಾಚಾರವನ್ನು ನಿಯಂತ್ರಿಸುವುದು ಹಾಗೂ ಆಡಳಿತದಲ್ಲಿ ಪ್ರತಿಯೊಬ್ಬರೂ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆಯ ಮೂಲಕ ನೌಕರಶಾಹಿ ವರ್ಗಗಳಲ್ಲಿ ಹೊಣೆಗಾರಿಕೆಯನ್ನು ಮೂಡಿಸುವುದು ಕಾನೂನಿನ ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಲೇಖನದಲ್ಲಿ ಹಲವಾರು ಉದ್ದೇಶಗಳು ಸಫಲವಾಗಲು ಮಾಹಿತಿ ಹಕ್ಕು ಕಾಯಿದೆಯು

* **ಜ್ಯೋತಿ ಎಮ್.ಆರ್.,** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಖರಾಯಪಟ್ಟಣ, ಕಡೂರು, ಚಿಕ್ಕಮಗಳೂರು.

** **ಡಾ. ಜಾಹ್ನವಿ ಎಸ್.ಎಸ್.,** ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಹಾಗೂ ಸಂಶೋಧನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

ಪರಿಣಾಮಕಾರಿಯಾಗಿ ಅನುಷ್ಠಾನವಾಗುವುದನ್ನು ವಿಶ್ಲೇಷಿಸಲಾಗಿದೆ.

**KEYWORDS:** ಸ್ಥಳೀಯ ಆಡಳಿತ, ಮಾಹಿತಿ ಹಕ್ಕು ಕಾಯ್ದೆ, ಪಂಚಾಯತ್ ರಾಜ್ ವ್ಯವಸ್ಥೆ, ಅಧಿಕಾರ ವಿಕೇಂದ್ರೀಕರಣ, ಆಡಳಿತದಲ್ಲಿ ಪಾರದರ್ಶಕತೆ.

## 1. ಭಾರತದಲ್ಲಿ ಸ್ಥಳೀಯ ಆಡಳಿತದ ಪರಿಕಲ್ಪನೆ

ಮಹಾತ್ಮ ಗಾಂಧೀಜಿಯವರು ಗ್ರಾಮಗಳ ಅಭಿವೃದ್ಧಿಗಾಗಿ ಪ್ರತಿಪಾದಿಸಿದ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಲು ನಮ್ಮ ಸಂವಿಧಾನ ರಚನಾಕಾರರು ಭಾರತ ಸಂವಿಧಾನದ ನಾಲ್ಕನೇ ಭಾಗವಾಗಿರುವ ರಾಜ್ಯ ನಿರ್ದೇಶಕ ತತ್ವದಲ್ಲಿ ನಲವತ್ತನೇ ವಿಧಿಯನ್ನು ಸೇರಿಸಿದ್ದಾರೆ. ಈ ತತ್ವಕ್ಕೆ ಅನುಸಾರವಾಗಿ ರಾಜ್ಯ ಸರ್ಕಾರಗಳು ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸಿ, ಅವುಗಳು ಸಮರ್ಪಕ ಸ್ಥಳೀಯ ಸರ್ಕಾರಗಳಂತೆ ಕಾರ್ಯಗಳನ್ನು ಕೆಲಸ ಮಾಡಲು ಸೂಕ್ತವಾದ ಅಧಿಕಾರಗಳನ್ನು ಮತ್ತು ನೀಡುವುದು ಅತ್ಯಾವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮಗಳು ಸಮೃದ್ಧ, ಸ್ವಯಂ ಪರಿಪೂರ್ಣ, ಸ್ವಯಂ ಶಕ್ತಿಶಾಲಿಯಾಗಿ ಸ್ವಾವಲಂಬಿ ಗ್ರಾಮಗಳಾದಾಗ ಮಾತ್ರ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗಿದ್ದು, ಇದಕ್ಕಾಗಿ ಅಧಿಕಾರ ಮತ್ತು ಜವಾಬ್ದಾರಿಯನ್ನು ವಿಕೇಂದ್ರೀಕರಿಸಲಾಗುತ್ತಿದೆ. ಅಧಿಕಾರ ಮತ್ತು ಅದರ ನಿಯಂತ್ರಣ ಜನರ ಹಿಡಿತದಲ್ಲಿ ಇರಬೇಕಾಗಿದ್ದು, ಪ್ರಜಾಪ್ರಭುತ್ವದ ಮೂಲ ಘಟಕವಾದ ಗ್ರಾಮಗಳು ಸ್ವಯಂ ಪರಿಪೂರ್ಣ ಮತ್ತು ಸ್ವಾವಲಂಬಿ ಗ್ರಾಮಗಳಾದಾಗ ಮಾತ್ರ ನೈಜವಾದ ರಾಜಕೀಯ, ಆರ್ಥಿಕ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವವು ಅರ್ಥಪೂರ್ಣವಾಗುತ್ತದೆ. ಪ್ರಸ್ತುತದ ದಿನಗಳಲ್ಲಿ ಶೋಷಣೆ, ಅನ್ಯಾಯ, ತಾರತಮ್ಯ, ಅಸಮಾನತೆಗಳಿಂದ ಗ್ರಾಮಗಳನ್ನು ಮುಕ್ತಗೊಳಿಸಬೇಕಾದ ಅಗತ್ಯತೆಯಿದ್ದು, ಗ್ರಾಮಗಳಲ್ಲಿ ಪ್ರಗತಿಪರವಾದ ರೀತಿಯಲ್ಲಿ ವಿಕೇಂದ್ರೀಕರಣಗೊಳಿಸಬೇಕೆಂಬುದು ಮಹಾತ್ಮ ಗಾಂಧೀಜಿಯವರ ತತ್ವವಾಗಿದೆ. ಅಧಿಕಾರ ಮತ್ತು ಅಧಿಕಾರಿಗಳು ಮೇಲಿನ ಸ್ತರದಿಂದ ಕೆಳಸ್ತರಕ್ಕೆ ಹರಿಯುವ ಬದಲು ಕೆಳಸ್ತರದಿಂದ ಮೇಲಿನ ಸ್ತರಕ್ಕೆ ಹರಿಯುವಂತಾಗಲು ಆಡಳಿತಾತ್ಮಕವಾಗಿ ಮಾತ್ರವಲ್ಲದೆ ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಅಧಿಕಾರಗಳು ವಿಕೇಂದ್ರೀಕರಿಸಲ್ಪಡಬೇಕು. ಅಂದರೆ ಆರ್ಥಿಕ ಕ್ಷೇತ್ರದಲ್ಲಿ ತಮ್ಮದೇ ಆದ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವಲ್ಲಿ ಹಾಗೂ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಮತ್ತು ಅದನ್ನು ವಿನಿಯೋಗಿಸುವಲ್ಲಿ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವಲ್ಲಿ, ಅವುಗಳ ಪರಿಹಾರ ಕ್ರಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ ಗ್ರಾಮಗಳಿಗೆ ಹೆಚ್ಚು ಅಧಿಕಾರ ಮತ್ತು ಜವಾಬ್ದಾರಿಗಳನ್ನು ನೀಡಿದಾಗ

ಸದೃಢವಾದ ಸಂಪದ್ಭರಿತ ಗ್ರಾಮಗಳಾಗಿ ಅಭಿವೃದ್ಧಿ ಹೊಂದುತ್ತವೆ. ಈ ನಿಟ್ಟಿನಲ್ಲಿ 20ನೇ ಶತಮಾನದ ಸಮಾಜ ಹಾಗೂ ರಾಜಕೀಯ ಸುಧಾರಕರಾದಂತಹ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಚಿಂತನೆಗಳಾದ ಅಂತ್ಯೋದಯ, ಸರ್ವೋದಯ, ಮದ್ಯಪಾನ ನಿಷೇಧ, ಮಹಿಳೆ–ಪುರುಷರ ಸಮಾನತೆ ತತ್ವಗಳು ಸದೃಢ ರಾಷ್ಟ್ರ ನಿರ್ಮಾಣದ ಆಧಾರ ಸ್ತಂಭಗಳಾಗಿದ್ದು, ನಮ್ಮ ರಾಷ್ಟ್ರದ ಸಂವಿಧಾನದ ರಚನಾಕಾರರ ಮೇಲೆ ಗಾಂಧೀಜಿಯವರ ತತ್ವಗಳು ಗಾಢವಾಗಿ ಪ್ರಭಾವ ಬೀರಿವೆ.

**ಪ್ರಾಚೀನ ಕಾಲದಲ್ಲಿ ಪಂಚಾಯಿತಿಗಳು:**

ಪಂಚಾಯತ್ ರಾಜ್ ವ್ಯವಸ್ಥೆಯು ಹೊಸ ಪರಿಕಲ್ಪನೆಯಲ್ಲ, ಇದು ಭಾರತದ ಗ್ರಾಮೀಣ ಸಂಸ್ಕೃತಿಯ ಪರಂಪರೆಯ ಭಾಗವಾಗಿದೆ. ಭಾರತದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಪುರಾತನ ಕಾಲದಿಂದಲೂ ಬೆಳೆದುಬಂದಿದ್ದು, ಗ್ರಾಮಪಂಚಾಯಿತಿಗಳು ವೇದಗಳ ಕಾಲದಲ್ಲಿಯೂ ಅಸ್ತಿತ್ವದಲ್ಲಿದ್ದದನ್ನು ಕಾಣಬಹುದಾಗಿದೆ. ಪ್ರಾಚೀನ ಕಾಲದಲ್ಲಿ ಇದನ್ನು 'ಪಂಚಾಯತ್' ಎಂಬುದಾಗಿ ಕರೆಯಲಾಗುತ್ತಿದ್ದು, ಗ್ರಾಮದ ಹಿರಿಯರು, ಪ್ರಮುಖರು ಆದಂತಹ ಪಂಚರಿಂದ (ಐವರು) ಕೂಡಿದ ಸಂಸ್ಥೆಯನ್ನು ಗ್ರಾಮಪಂಚಾಯಿತಿಯೆಂದು ಕರೆಯಲಾಗುತ್ತಿತ್ತು. ಈ ಐವರನ್ನೊಳಗೊಂಡ ಗ್ರಾಮ ಪಂಚಾಯಿತಿಯು ಗ್ರಾಮಕ್ಕೆ ಸಂಬಂಧಿಸಿದಂತೆ ಆಡಳಿತ, ಹಣಕಾಸು, ಸಾಮಾಜಿಕ ಮತ್ತು ನ್ಯಾಯದ ಎಲ್ಲಾ ಬಗೆಯ ವ್ಯವಹಾರಗಳನ್ನು ನಿರ್ವಹಿಸುವ ಅಧಿಕಾರ ಹೊಂದಿದ್ದರೂ ಇವುಗಳು ಪ್ರಾತಿನಿಧಿಕ ಸಂಸ್ಥೆಗಳಾಗಿರಲಿಲ್ಲ. ಮಧ್ಯಕಾಲದಲ್ಲಿ ಗ್ರಾಮ, ಗಣ, ಗಣಸಂಘ, ಸಭಾ, ಸಮಿತಿಗಳೆಂಬ ಹೆಸರುಗಳಿಂದ ಕರೆಯಲಾಗುತ್ತಿದ್ದು, ಮನುಸ್ಮೃತಿ, ಮಹಾಭಾರತದ ಶಾಂತಿ ಪರ್ವ, ಕೌಟಿಲ್ಯನ ಅರ್ಥಶಾಸ್ತ್ರ, ವಾಲ್ಮೀಕಿ ರಾಮಾಯಣ, ಮೆಗಾಸ್ತನೀಸ್‌ನ ಬರವಣಿಗೆ ಇತ್ಯಾದಿಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದ ವಿಷಯವನ್ನು ಚರ್ಚಿಸಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಪುರಾಣ ಮತ್ತು ಐತಿಹಾಸಿಕ ಗ್ರಂಥಗಳು ನಮ್ಮ ಗ್ರಾಮಪಂಚಾಯಿತಿಗಳ ಪೂರ್ವ ಇತಿಹಾಸವನ್ನು ತಿಳಿಸುವ ಮೂಲಕ ಅವುಗಳ ಮಹತ್ವವನ್ನು ಎತ್ತಿಹಿಡಿಯಲಾಗಿದೆ.

ಪ್ರಾಚೀನ ಕಾಲದ ಪಂಚಾಯತ್ ರಾಜ್ ಸಂಸ್ಥೆಗಳು ಅತೀ ಕಡಿಮೆ ಸಂಪನ್ಮೂಲಗಳನ್ನು ಹೊಂದಿದ್ದು, ಇಲ್ಲಿನ ಆದಾಯದ ಮೂಲಗಳನ್ನು ಪಂಚಾಯಿತಿಯಲ್ಲಿಯೇ ನಿರ್ಧರಿಸಲಾಗುತ್ತಿತ್ತು. ಅವುಗಳೆಂದರೆ, ನ್ಯಾಯ ತೀರ್ಮಾನಗಳಿಂದ ಬರುವ ದಂಡ, ಸ್ಥಳೀಯ ದೇವಾಲಯಗಳಿಂದ ಬರುವ ಆದಾಯ, ವಿವಾಹ ಶುಲ್ಕ, ತೆರಿಗೆ ಮತ್ತು ವ್ಯಾಪಾರದ ಮೇಲಿನ ತೆರಿಗೆಗಳಿಂದ ಆದಾಯ ಸಂಗ್ರಹವಾಗುತ್ತಿತ್ತು. ಕೆಲವು ರಾಜರುಗಳು ಯುದ್ಧ ಹಾಗೂ ಸೈನ್ಯದ ವೆಚ್ಚವನ್ನು ಭರಿಸಲು ಗ್ರಾಮಗಳ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಲು ಪ್ರಾರಂಭಿಸಿದರು. ಅಂದು ಇದ್ದಂತಹ ಜಾತಿ ಪಂಚಾಯಿತಿ ವ್ಯವಸ್ಥೆ, ಅಸಮರ್ಪಕವಾದ ಹಾಗೂ ತಾರತಮ್ಯತೆಯ ತೆರಿಗೆ ವಿಧಾನ ಹಾಗೂ ಸಮರ್ಪಕ ನ್ಯಾಯದ ನ್ಯೂನತೆಗಳು

ಪಂಚಾಯಿತಿಗಳು ಅವನತಿ ಹೊಂದಲು ಕಾರಣವಾದವು.

## ಮೈಸೂರು ಪ್ರಜಾಪ್ರತಿನಿಧಿ ಸಭೆ ಸ್ಥಾಪನೆ–1881

ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಮಹಾರಾಜ ಚಾಮರಾಜ ಒಡೆಯರ್ ದಿವಾನ್ ಸಿ.ರಂಗಾಚಾರ್ಲು ಸಲಹೆಯಂತೆ 1881 ರಲ್ಲಿ ಸ್ಥಾಪಿಸಿದ್ದು, ಮಹಾರಾಜರು ಆಗ ತಾನೇ ಬ್ರಿಟಿಷರಿಂದ ಅಧಿಕಾರ ವಹಿಸಿಕೊಂಡವರಾದ್ದರಿಂದ ಆಡಳಿತದ ಬಗ್ಗೆ ಆಗಾಗ್ಗೆ ಪ್ರಜಾಪ್ರಮುಖರ ಅಭಿಪ್ರಾಯಗಳನ್ನು ತಿಳಿಯುವುದು ಉತ್ತಮವೆಂದು ಭಾವಿಸಿ ಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಹೀಗೆ ರಚನೆಯಾದ ಮೈಸೂರು ಪ್ರಜಾಪ್ರತಿನಿಧಿ ಸಭೆಯೇ ಈಗ ಶಾಸಕಾಂಗ ಎಂದು 31 ಕರೆಯಲಾಗುತ್ತಿದ್ದು, ಪ್ರಜಾಪ್ರತಿನಿಧಿ ಸಭೆಯಲ್ಲಿ ಒಟ್ಟು 144 ಸದಸ್ಯರಿದ್ದರು. ಅವರಲ್ಲಿ ವಿವಿಧ ರೈತವರ್ಗದವರು, ಜಿಲ್ಲಾಧಿಕಾರಿಗಳು ನಾಮಕರಣ ಮಾಡಿದ ಸದಸ್ಯರು, ವಿದ್ಯಾವಂತರು, ಪ್ಲಾಂಟರ್‌ಗಳು, ಭೂಮಾಲೀಕ ವರ್ಗಗಳಿಂದ ಆರಿಸಿ ಬರುತ್ತಿದ್ದರು. ಅವರ ಅಧಿಕಾರಾವಧಿ 3 ವರ್ಷಗಳಾಗಿದ್ದು, ಈ ಪ್ರತಿನಿಧಿ ಸಭೆಯು ಸರ್ಕಾರಕ್ಕೆ ಮನವಿ ಸಲ್ಲಿಸುವ ಇಲ್ಲವೆ ಸಲಹೆ ನೀಡುವ ಸಭೆಯಾಗಿತ್ತು. ಸಭೆಯು ಪ್ರತಿವರ್ಷವೂ ಮೈಸೂರಿನ ಅರಮನೆಯಲ್ಲಿ ಜರುಗುತ್ತಿದ್ದು, ದಿವಾನರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಿದ್ದರು. ನವರಾತ್ರಿ ಹಬ್ಬದ ಕೊನೆಯ ದಿನದಂದು ಅದು ಆರಂಭವಾಗುತ್ತಿದ್ದು, ಸಭೆಯ ಮುಂದೆ ಸರ್ಕಾರ ಹಿಂದಿನ ವರ್ಷ ಮಾಡಿದ ಮತ್ತು ಮುಂದಿನ ವರ್ಷ ಮಾಡಬೇಕಾದ ಆಡಳಿತ ಕಾರ್ಯಗಳನ್ನು ಚರ್ಚಿಸುವುದರ ಜೊತೆಗೆ ಆಯವ್ಯಯದ ಬಗೆಗಿನ ವಿಚಾರವನ್ನು ಕೂಡ ತಿಳಿಸುತ್ತಿದ್ದರು. ದಿವಾನರು ಈ ಸಭೆಯ ಸದಸ್ಯರಿಗೆ ಬಜೆಟ್ ಅನ್ನು ಸಿದ್ಧಪಡಿಸುವ ಬಗೆಗೆ ಅಭಿಪ್ರಾಯಗಳನ್ನು ತಿಳಿಸುವಂತೆ ಸೂಚಿಸುವುದರ ಜೊತೆಗೆ ಜನತೆಯ ಆಶೋತ್ತರಗಳನ್ನು ಅಭಿವ್ಯಕ್ತಿಗೊಳಿಸುವ ಸಂಪೂರ್ಣ ಅವಕಾಶವನ್ನು ಕೂಡ ನೀಡಲಾಗಿತ್ತು. ಸದಸ್ಯರಿಗೆ ಸಾರ್ವಜನಿಕ ಹಿತಾಸಕ್ತಿ ಬಗ್ಗೆ ಪ್ರಶ್ನೆ ಕೇಳುವ, ಸಲಹೆ ನೀಡುವ, ಮನವಿ ಅರ್ಪಿಸುವ ಅಧಿಕಾರವಿದ್ದಂದಾಗಿ ಪ್ರಜಾಭಿಪ್ರಾಯ ಮತ್ತು ಸಭೆಯ ಆಡಳಿತ ನೀತಿಗಳನ್ನು ರೂಪಿಸಲು ನೆರವಾಗುತ್ತಿತ್ತು. 1891ರ ನಂತರ ಪ್ರಜಾಪ್ರತಿನಿಧಿ ಸದಸ್ಯರನ್ನು ಚುನಾಯಿಸುವ ಪದ್ಧತಿ ಜಾರಿಗೆ ತರುವ ಮೂಲಕ ಅವರ ಹೆಸರುಗಳನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಗುತ್ತಿತ್ತು.

## ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಲ್ಲಿ ಸ್ಥಳೀಯ ಆಡಳಿತ

ಲಾರ್ಡ್ ಮೇಯೋ ರವರ ಶಿಫಾರಸ್ಸಿನಂತೆ ಗ್ರಾಮ ಮತ್ತು ನಗರದ ಸ್ಥಳೀಯ ಸರ್ಕಾರಗಳಿಗೆ ಹೆಚ್ಚಿನ ಮಹತ್ವ ದೊರಕಿದ್ದು, ಪೊಲೀಸ್, ಸಾರ್ವಜನಿಕ ಸೇವೆ, ಶಿಕ್ಷಣ, ಮೊದಲಾದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಂತೀಯ ಸರ್ಕಾರದ ಜವಾಬ್ದಾರಿಗಳನ್ನು ಹಾಗೂ ಅಧಿಕಾರಗಳನ್ನು ಕೇಂದ್ರ ಸರ್ಕಾರದಿಂದ ಪ್ರಾಂತ್ಯಕ್ಕೆ ವಿಸ್ತರಿಸುವುದಕ್ಕಾಗಿ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಯತ್ನಗಳು ನಡೆದವು. ಇದರ ಉದ್ದೇಶ ವಿಕೇಂದ್ರೀಕೃತ ಆಡಳಿತದ ಮೂಲಕ ಆರ್ಥಿಕ ಶೋಷಣೆ ಮಾಡುವುದು, ಸ್ಥಳೀಯವಾಗಿ ದೊರಕುವ ಎಲ್ಲಾ ಸಂಪನ್ಮೂಲಗಳ ಮೇಲೆ

ವ್ಯವಸ್ಥಿತವಾಗಿ ಹಾಗೂ ಆರ್ಥಿಕ ವ್ಯವಸ್ಥೆಯ ಮೇಲೆ ಸಾಮ್ಯತೆಯನ್ನು ಸಾಧಿಸುವುದಾಗಿತ್ತು. ಸ್ಥಳೀಯ ಸರ್ಕಾರದ ಪಿತಾಮಹ ಎಂದು ಕರೆಯಲಾದ ಲಾರ್ಡ್ ರಿಪ್ಪನ್ ರವರು ಸ್ಥಳಿಯ ಸ್ವಯಂ ಸರ್ಕಾರದ ಸ್ಥಾಪನೆಗೆ ಕೆಲವು ಶಿಫಾರಸ್ಸುಗಳನ್ನು ಮಾಡಿದರು. ಆದರೆ ಈ ಶಿಫಾರಸ್ಸುಗಳು ಜಾರಿಗೆ ಬರದಿದ್ದರಿಂದಾಗಿ ಸ್ಥಳೀಯ ಸರ್ಕಾರಗಳಿಗೆ ಪುನಶ್ಚೇತನ ಕೊಡಲು 1907ರಲ್ಲಿ ಎಡ್ವರ್ಡ್ ಚಾರ್ಲ್ಸ್ ಹಾಬ್ ಹೌಸ್ ನೇತೃತ್ವದಲ್ಲಿ 'ರಾಯಲ್ ಕಮಿಷನ್ ಆನ್ ಡಿಸೆಂಟ್ರಲೈಸೇಶನ್' ಕಮಿಟಿಯನ್ನು ನೇಮಕ ಮಾಡಲಾಗಿತ್ತು.

**ಭಾರತ ಸರ್ಕಾರ ನೇಮಕ ಮಾಡಿದ ಸಮಿತಿಗಳು**

1950ರ ಜನವರಿ 26ರಂದು ಭಾರತ ಸಂವಿಧಾನ ಜಾರಿಯಾದ ನಂತರ ಸಂವಿಧಾನದ 4ನೇ ಭಾಗದಲ್ಲಿ 36ನೇ ವಿಧಿಯಿಂದ 51ನೇ ವಿಧಿಗಳ ಮೂಲಕ ರಾಜ್ಯನಿರ್ದೇಶಕ ತತ್ವಗಳ ಅಡಿಯಲ್ಲಿ ಸ್ಥಳೀಯ ಆಡಳಿತದ ಬಗ್ಗೆ ಪ್ರಸ್ತಾಪಿಸಿ ಅನುಷ್ಠಾನಗೊಳಿಸಲಾಗಿತ್ತು. ಇದರ ಆಧಾರದ ಮೇಲೆ ಅಂದಿನ ಭಾರತ ಸರ್ಕಾರದ ಪ್ರಧಾನ ಮಂತ್ರಿಗಳು ಕಾಲ ಕಾಲಕ್ಕೆ ಕೆಲವು ಸಮಿತಿಗಳನ್ನು ನೇಮಿಸಿತು. ಅವುಗಳೆಂದರೆ ಬಲವಂತರಾಯ್ ಮೆಹತಾ ಸಮಿತಿ (1956–57), ಅಶೋಕ್ ಮೆಹತಾ ಸಮಿತಿ (1977–78) ಜಿ.ವಿ.ಕೆ. ರಾವ್ ಸಮಿತಿ (1985), ಎಲ್.ಎಂ.ಸಿಂಘ್ವಿ ಸಮಿತಿ – 1986 ಮುಂತಾದವುಗಳನ್ನು ನೇಮಿಸಿ ಅವುಗಳು ನೀಡಿದ ವರದಿಗಳ ಆಧಾರದ ಮೇಲೆ ಸ್ಥಳೀಯ ಆಡಳಿತವನ್ನು ವಿಸ್ತಾರಗೊಳಿಸಲಾಯಿತು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೇಲ್ಕಂಡ ಎಲ್ಲಾ ವರದಿಗಳ ಅನುಷ್ಠಾನದ ಸಾಧ್ಯಾ–ಸಾಧ್ಯತೆಗಳನ್ನು ಪರಿಶೀಲಿಸಿ ಅದರ ರಚನೆ, ಅಧಿಕಾರ ಪದ್ಧತಿಗಳನ್ನು ಪರೀಕ್ಷಿಸಲು ಕ್ರಮವಹಿಸಲಾಯಿತು. ವಿವಿಧ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದ್ದಂತಹ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ದ್ವಂದ್ವತೆ ಮತ್ತು ಗೊಂದಲಗಳನ್ನು ನಿವಾರಣೆ ಮಾಡಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಎಲ್ಲಾ ರಾಜ್ಯಗಳಲ್ಲಿ ಕಡ್ಡಾಯವಾಗಿ ಜಾರಿಗೆ ತರಲು ಹಾಗೂ ಎಲ್ಲಾ ರಾಜ್ಯಗಳಲ್ಲಿ ಸ್ಥಿರ, ಸುಭದ್ರವಾದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸ್ಥಾಪಿಸಲು ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿಯನ್ನು ಮಾಡುವ ಮೂಲಕ ಏಪ್ರಿಲ್ 24, 1993 ರಲ್ಲಿ ಜಾರಿಗೊಳಿಸಲಾಯಿತು.

**2. ಭಾರತದಲ್ಲಿ ಮಾಹಿತಿ ಹಕ್ಕು ಕಾಯ್ದೆ**

ಮಾಹಿತಿ ಹಕ್ಕು ಕಾಯ್ದೆ ಮತ್ತು ಅದರ ಉಲ್ಲಂಘನೆಯ ನಿಯಂತ್ರಣ ಮತ್ತು ನಿರ್ವಹಣೆಗೆ ಮಾಹಿತಿ ಹಕ್ಕು ಆಯೋಗದ ಅಗತ್ಯತೆಯನ್ನು ಮನಗಂಡ ನಂತರ 2005 ರಲ್ಲಿ ಮಾಹಿತಿ ಹಕ್ಕು ಕಾಯ್ದೆಯನ್ನು ರಾಷ್ಟ್ರಾಧ್ಯಕ್ಷರ ಅನುಮೋದನೆಯೊಂದಿಗೆ ಪ್ರಜೆಗಳು ಮತ್ತು ಪ್ರಜಾಪ್ರಭುತ್ವದ ಸಬಲೀಕರಣದ ಧ್ಯೇಯೋದ್ದೇಶದಿಂದ ಅನುಷ್ಠಾನಗೊಳಿಸಲಾಯಿತು. ಅಂದಿನಿಂದಲೂ ಜಾರಿಯಲ್ಲಿರುವ ಮಾಹಿತಿ ಹಕ್ಕು ಕಾಯ್ದೆಯ ಗುಣಾವಗುಣಗಳ ಸುತ್ತಲೂ ಅನೇಕ ವಾದ–ವಿವಾದಗಳು ಹುಟ್ಟಿಕೊಂಡಿವೆ. ಮಾಹಿತಿ ಹಕ್ಕು ಕಾಯ್ದೆ ಮತ್ತು ಮಾಹಿತಿ ಹಕ್ಕು ಆಯೋಗದ ತತ್ವಪೂರ್ಣ ಮತ್ತು

ಸತ್ವಪೂರ್ಣ ಕಾರ್ಯಾನುಷ್ಠಾನ ಮತ್ತು ಬಳಕೆಯಿಂದಾದ ಲಾಭ-ಹಾನಿಗಳು ಸಹಜವಾಗಿವೆ. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯು ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ತತ್ವಗಳ ಅಡಿಯಲ್ಲಿ ಸೃಷ್ಟಿಸಲ್ಪಟ್ಟಿದ್ದು, ಪ್ರಜೆಗಳು ಯಾವುದೇ ನಿರ್ಬಂಧಗಳಿಗೆ ಒಳಪಡದೆ ತಮ್ಮ ವ್ಯಕ್ತಿತ್ವವನ್ನು ನಿರಾತಂಕವಾಗಿ ವೃದ್ಧಿಸಿಕೊಳ್ಳಲು ಹಾಗೂ ಸ್ವಾತಂತ್ರ್ಯವನ್ನು ಅನುಭವಿಸಲು ಉತ್ತಮ ವಾತಾವರಣವನ್ನು ಕಲ್ಪಿಸಿಕೊಡುವ ಸರ್ಕಾರಗಳ ಮಾದರಿಗಳಲ್ಲಿ ಒಂದಾಗಿದೆ. ಭಾರತದ ಸಂವಿಧಾನದ ಪ್ರಕಾರ ನಮ್ಮದು ಪ್ರಜಾತಾಂತ್ರಿಕ ಗಣರಾಜ್ಯವಾದ್ದರಿಂದ ಪ್ರಜಾಸತ್ತಾತ್ಮಕ ಕಾರ್ಯವೈಖರಿಗೆ ಹಾಗೂ ಭ್ರಷ್ಟಾಚಾರ ರಹಿತ ಆಡಳಿತ ನಿರ್ವಹಣೆಗೆ ಸರ್ಕಾರಗಳು ಬದ್ಧವಾಗಿವೆ. ಈ ಕಾರಣಕ್ಕೆ ಸರ್ಕಾರದ ಜವಾಬ್ದಾರಿಗಳನ್ನು ನೆನಪಿಸಲು ನಾಗರೀಕರಿಗೆ ಸೂಕ್ತ ಮಾಹಿತಿ ತಿಳಿಯಲು ಮಾಹಿತಿ ಹಕ್ಕನ್ನು ಒಂದು ಅಸ್ತ್ರವಾಗಿ ನೀಡಲಾಗಿದ್ದು, ಭಾರತ ಅತ್ಯಂತ ವಿಶಾಲ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದರಿಂದ ಸರ್ಕಾರದ ಕಾರ್ಯಗಳಲ್ಲಿ ಜನರ ಸಹಭಾಗಿತ್ವವನ್ನು ಹೊಂದಿದೆ. ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಮಾಹಿತಿ ಮುಕ್ತವಾಗಿ ವಿನಿಮಯವಾದಲ್ಲಿ ನಾಗರೀಕ ಸಮುದಾಯ ಅಗತ್ಯ ಮಾಹಿತಿಗಳನ್ನು ಕೂಲಂಕುಷವಾಗಿ ಚರ್ಚಿಸಲಾಗುತ್ತದೆ. ಈ ನಿಟ್ಟಿನಲ್ಲಿ ಮಾಹಿತಿ ಹಕ್ಕು ವ್ಯವಸ್ಥೆಯನ್ನು ಸರಿದೂಗಿಸುವ, ಬದ್ಧಗೊಳಿಸುವ ಹಾಗೂ ಪಾರದರ್ಶಕತೆ ಉಂಟುಮಾಡಿ ಹೊಣೆಗಾರಿಕೆ ತರುವ ಕಾರ್ಯವನ್ನು ಮಾಡುತ್ತದೆ. ಹಾಗಾಗಿ ಮಾಹಿತಿ ಹಕ್ಕು ಬಹುಮುಖ ಹೊಂದಿರುವ ಏಕೀಕೃತ ಅಭಿವೃದ್ಧಿಯ ಹರಿಕಾರ ಎನ್ನಬಹುದಾಗಿದೆ. ಅಲ್ಲದೆ ಭಾರತದ ಮಟ್ಟಿಗಂತೂ ಮಾಹಿತಿ ಹಕ್ಕು ಕಾಯ್ದೆ ಸಾಮಾನ್ಯ ನಾಗರೀಕರ ವರವೆಂದೇ ಪರಿಗಣಿಸಲಾಗಿದೆ.

ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜನರಿಂದ ಜನರಿಗಾಗಿ ಜನರಿಗೋಸ್ಕರವೇ ಇರುವ ಸಹಭಾಗಿತ್ವದಲ್ಲಿ ಜನರು ಆಡಳಿತದಲ್ಲಿ ಭಾಗವಹಿಸುವಂತೆ ಮಾಡುವುದು ಮುಖ್ಯವಾಗಿದ್ದು, ಮಾಹಿತಿ ಹಕ್ಕು ಕಾಯ್ದೆ ಜಾರಿಯಾದ ನಂತರ ಜನರು ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣ ಹೆಚ್ಚಾಗಿ ಆಡಳಿತದಲ್ಲಿ ಮುಕ್ತತೆ ತಂದು ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುತ್ತಿದೆ. ಅಧಿಕಾರಿಗಳಲ್ಲಿ ಬದ್ಧತೆ, ದಕ್ಷತೆಯನ್ನು ವೃದ್ಧಿಸುವುದರಿಂದಾಗಿ ಮಾಹಿತಿ ಹಕ್ಕು ಕಾಯ್ದೆ ಆಡಳಿತದಲ್ಲಿ ಜನರು ಪಾಲ್ಗೊಳ್ಳುವ ಮಾರ್ಗವಾಗಿರುವ ಮೂಲಕ ಸಹಭಾಗಿತ್ವ ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ಬರುತ್ತದೆ. ಪ್ರಜಾಪ್ರಭುತ್ವ ಸಬಲೀಕರಣಗೊಂಡು ಇನ್ನಷ್ಟು ಗಟ್ಟಿಗೊಳ್ಳುವುದಕ್ಕಾಗಿ ಪ್ರಜಾಪ್ರಭುತ್ವವು ಫಲಕಾರಿಯಾಗಬೇಕಾದರೆ ನಾಗರೀಕರ ಸಹಭಾಗಿತ್ವ ಪಾಲ್ಗೊಳ್ಳುವಿಕೆ ಅತ್ಯಗತ್ಯವಾಗಿದ್ದು, ಪ್ರಜೆಗಳು ಆಡಳಿತದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಪ್ರಜಾಸತ್ತಾತ್ಮಕ ಆಡಳಿತ ಸಂವರ್ಧನೆಗೊಂಡು ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ಬಂದಂತಾಗುತ್ತದೆ. ಈ ನಿಟ್ಟಿನಲ್ಲಿ ಸಮರ್ಪಕವಾಗಿ ಮಾಹಿತಿಗಳನ್ನು ನಾಗರೀಕರಿಗೆ ದೊರೆಯುವಂತೆ ಮಾಡುವುದು ಮಾಹಿತಿ ಹಕ್ಕು ಆಯೋಗಗಳ ಧ್ಯೇಯವಾಗಿದೆ. ಮಾಹಿತಿ ಹಕ್ಕು ಪ್ರಜೆಗಳಿಗೆ ಆಮ್ಲಜನಕವಿದ್ದಂತೆ, ಏಕೆಂದರೆ ಮನುಷ್ಯನಿಗೆ ಪ್ರಜೆಗಳು ತಮ್ಮ ಜೀವನವನ್ನು ಉತ್ತಮವಾಗಿ ನಿರ್ವಹಿಸಲು ತಮ್ಮ

ವ್ಯಕ್ತಿತ್ವವನ್ನು ಸಮಾಜದಲ್ಲಿ ರೂಪಿಸಿಕೊಳ್ಳಲು ಅನ್ಯಾಯದ ವಿರುದ್ಧ ಪ್ರತಿಭಟಿಸಲು ಮಾಹಿತಿ ಹಕ್ಕು ಹೆಚ್ಚು ಮಹತ್ವದಿಂದ ಕೂಡಿದೆ. ಮಾಹಿತಿ ಕೊರತೆಯಿಂದ ಸರ್ಕಾರದ ಆಡಳಿತದಲ್ಲಿನ ಲೋಪದೋಷಗಳನ್ನು ಪ್ರಶ್ನಿಸಲಾಗುವುದಿಲ್ಲ. ನೌಕರಶಾಹಿಗಳು ನಾಗರೀಕರೊಂದಿಗೆ ಪಾರದರ್ಶಕವಾಗಿ ಮುಕ್ತವಾಗಿ ಮಾಹಿತಿ ಹಂಚಿಕೊಳ್ಳಲು ಹಿಂಜರಿಯುತ್ತಾರೆ. ಏಕೆಂದರೆ ಅವರ ಭ್ರಷ್ಟತೆ, ಅಧಿಕಾರ ದುರುಪಯೋಗ ನಾಗರೀಕರಿಗೆ ತಿಳಿಯುತ್ತದೆಂಬ ಭಯ, ಆತಂಕ ನೌಕರರು/ಆಡಳಿತಶಾಹಿಗಳ ಈ ಮನೋಭಾವದ ವಿರುದ್ಧ ಪ್ರತಿಭಟನೆ ರೂಪದಲ್ಲಿ ಜಾರಿಗೆ ಬಂದ ಕಾಯ್ದೆಯೇ ಮಾಹಿತಿ ಹಕ್ಕು ಕಾಯಿದೆಯಾಗಿದೆ.

ಮಾಹಿತಿಯನ್ನು ನಾಗರೀಕರೊಂದಿಗೆ ಹಂಚಿಕೊಳ್ಳುವುದರಿಂದ ಪ್ರಜಾಪ್ರಭುತ್ವ ಸಬಲೀಕರಣಕ್ಕೆ ಪೂರಕ ಎಂಬ ಅಂಶವನ್ನು ಮಾಹಿತಿ ಹಕ್ಕು ಗುರುತಿಸಿದ್ದು, ಗೌಪ್ಯತೆ ಎಂಬುದು ಈಗ ಚರಿತ್ರೆಯಾಗಿದೆ. ಮಾಹಿತಿ ಹಕ್ಕು ಕಾಯ್ದೆಯ ಪ್ರಕಾರ ಯಾವ ಮಾಹಿತಿಯನ್ನು ಜನಪ್ರತಿನಿಧಿಗಳಿಗೆ ನಿರಾಕರಿಸಲಾಗುವುದಿಲ್ಲವೋ ಅದನ್ನು ನಾಗರೀಕರಿಗೂ ನಿರಾಕರಿಸಲು ಸಾಧ್ಯವಿಲ್ಲ. ಈ ಕಾನೂನು ಕೇಂದ್ರ ಸರ್ಕಾರದ ಸಂಸ್ಥೆ/ಇಲಾಖೆಗಳಿಗೆ ಮಾತ್ರ ಅನ್ವಯಿಸದೆ ಎಲ್ಲ ರಾಜ್ಯ ಸರ್ಕಾರಗಳಿಗೂ ಅನ್ವಯಿಸುತ್ತದೆ. ಸ್ಥಳೀಯ ಆಡಳಿತ ವ್ಯವಸ್ಥೆಗೂ ಇದು ಅನ್ವಯವಾಗಿದ್ದು, ಇದರ ಅರ್ಥ ದೇಶದ ಎಲ್ಲ ಹಳ್ಳಿ, ನಗರ, ಜಿಲ್ಲೆಗಳಲ್ಲಿರುವ ನಾಗರೀಕರು ಸಾರ್ವಜನಿಕ ಪ್ರಾಧಿಕಾರಗಳ ಹಿಡಿತದಲ್ಲಿರುವ ಮಾಹಿತಿಗಳನ್ನು ಮುಕ್ತವಾಗಿ ಪಡೆಯಬಹುದು ಎಂದರ್ಥವಾಗಿದೆ. ಸ್ವಾತಂತ್ರ್ಯ ನಂತರ ಭಾರತ ಸರ್ಕಾರ ಜಾರಿಗೊಳಿಸಿದ ಕಾಯ್ದೆಗಳಲ್ಲಿ ಅತ್ಯಂತ ಕ್ರಾಂತಿಕಾರಕ, ಪ್ರಜಾಸ್ನೇಹಿ, ಪ್ರಯೋಜನಕಾರಿ ಕಾಯ್ದೆ ಎಂದರೆ ಮಾಹಿತಿ ಹಕ್ಕು ಕಾಯ್ದೆಯಾಗಿದೆ. ಕ್ರಮವಾಗಿ 11-05-2005 ಮತ್ತು ರಾಜ್ಯಸಭೆಯಲ್ಲಿ 12-05-2005 ರಂದು ಸಂಸತ್ತಿನ ಉಭಯ ಸದನಗಳಾದ ಲೋಕಸಭೆಗಳಲ್ಲಿ ಅನುಮೋದನೆ ಪಡೆದು 15-06-2005 ರಂದು ರಾಷ್ಟ್ರಪತಿಗಳ ಅಂಗೀಕಾರದೊಂದಿಗೆ ಕೆಲ ಉಪಬಂಧಗಳು ಜಾರಿಗೊಂಡು 12-10-2005 ರಂದು ಕಾಯ್ದೆ ಸಂಪೂರ್ಣವಾಗಿ ದೇಶದಾದ್ಯಂತ ಅನುಷ್ಠಾನಗೊಂಡಿತು. ಇದರೊಂದಿಗೆ ಭಾರತದ ಸಂಸದೀಯ ಇತಿಹಾಸದಲ್ಲಿ ಎರಡು ಹಂತಗಳಲ್ಲಿ ಜಾರಿಯಾದ ಪ್ರಥಮ ಕಾಯ್ದೆ ಎಂಬ ಪ್ರಖ್ಯಾತಿ ಪಡೆದಿದೆ.

**ಉಪಸಂಹಾರ**

ಮಾಹಿತಿಯು ಜನರ ಹಕ್ಕುಗಳಿಗೆ ನೇರವಾಗಿ ಹೊಣೆಗಾರರಾಗಿದ್ದು, ಕೇಂದ್ರದಿಂದ ಸ್ಥಳೀಯ ಸರ್ಕಾರದವರೆಗೆ ಮಾಹಿತಿಗಳು ಮುಕ್ತವಾಗಿ ವಿನಿಮಯವಾದಾಗ ಮಾತ್ರ ಪ್ರಜಾಪ್ರಭುತ್ವ ಮತ್ತಷ್ಟು ಸಬಲೀಕರಣಗೊಂಡು ಸದೃಢ ಬಲಿಷ್ಠಗೊಳ್ಳಲು ಸಾಧ್ಯವಾಗುತ್ತದೆ. ಮಾಹಿತಿ ಹಕ್ಕು ಒಂದು ಜನಸ್ನೇಹಿ ಕಾನೂನಾಗಿರುವುದರಿಂದ ಲಕ್ಷಾಂತರ ಜನರು ಉಪಯೋಗ ಪಡೆದಿದ್ದು, ಕಾಯ್ದೆ ಜಾರಿಗೊಂಡ 10 ವರ್ಷಗಳಲ್ಲಿ ಮೂರ್ತ-ಅಮೂರ್ತ ಅಂಶಗಳು ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಾರ್ವಜನಿಕ ಆಡಳಿತದ ಮೇಲೆ ಪರಿಣಾಮ ಬೀರಿದೆ. ಇದರಿಂದ

ಪ್ರಜಾಪ್ರಭುತ್ವ ವ್ಯವಸ್ಥೆ ಸಾಕಷ್ಟು ಸಬಲೀಕರಣಗೊಂಡು ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚಿದೆ. ಮಾಹಿತಿ ಹಕ್ಕು ಕಾಯಿದೆಯು ಸರ್ಕಾರ ಮತ್ತು ಜನರ ನಡುವೆ ಸೇತುವೆ ನಿರ್ಮಿಸಿದ್ದು, ಕಾಯ್ದೆ ಜಾರಿಗೂ ಮುನ್ನ ಆಡಳಿತಶಾಹಿ ವರ್ಗದಲ್ಲಿ ಅಧಿಕಾರದ ಮದ, ಸ್ವೇಚ್ಛಾಚಾರ ಪ್ರವೃತ್ತಿ ನಿರಂಕುಶತ್ವ, ಪಕ್ಷಪಾತ, ಭ್ರಷ್ಟಾಚಾರ, ಕೆಂಪುಪಟ್ಟಿ ನೀತಿ/ ವಿಳಂಬ ಧೋರಣೆ, ಜಾತೀಯತೆ ಇತ್ಯಾದಿ ಅವ್ಯವಸ್ಥೆಗಳು ಹೆಚ್ಚಾಗಿದ್ದು, ಕಾಯ್ದೆ ಜಾರಿ ನಂತರ ಈ ಧೋರಣೆಗಳು, ಪ್ರವೃತ್ತಿಗಳು ಬದಲಾಗತೊಡಗಿವೆ. 1923 ರ ಸರ್ಕಾರಿ ಗೌಪ್ಯ ಅಧಿನಿಯಮಕ್ಕೆ ಪ್ರತಿಭಟನೆ ಎಂಬಂತೆ ಮಾಹಿತಿ ಹಕ್ಕು ಕಾಯ್ದೆ 2005 ಜಾರಿಗೊಂಡಿದೆ. ಈ ಕಾಯ್ದೆ ಭಾರತದ ಪ್ರಜಾಪ್ರಭುತ್ವದ ಭವಿಷ್ಯವನ್ನು ಉಜ್ವಲಗೊಳಿಸಿ ಸಬಲೀಕರಣವನ್ನು ಸಶಕ್ತಗೊಳಿಸಿದ್ದು, ಸಮಾಜದಲ್ಲಿ ಧ್ವನಿ ಇಲ್ಲದ ಶೋಷಿತರಿಗೆ/ ಶೋಷಿತ ವರ್ಗಗಳಿಗೆ ಧ್ವನಿ ಎತ್ತಲು ಮಾಹಿತಿ ಹಕ್ಕು ಕಾಯ್ದೆ ಒಂದು ಪ್ರಬಲ ಅಸ್ತ್ರ/ ಸಾಧನವಾಗಿದೆ.

## ಪರಾಮರ್ಶನ ಗ್ರಂಥಗಳು:

1. ಚಂದ್ರಶೇಖರ್ ಕೆ., (2009), ಅಭಿವೃದ್ಧಿ ಪಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು, ಬೆಂಗಳೂರು: ದೀಪ ಪಬ್ಲಿಕೇಶನ್ಸ್.
2. ಶಂಕರ್‌ರಾವ್ ಚ.ನ., (2014–15), ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಮಂಗಳೂರು: ಜೈಭಾರತ್ ಪ್ರಕಾಶನ.
3. ಸುರೇಶ್ ಕೆ.ಎಂ., (2015), ಭಾರತದ ಸಂವಿಧಾನ, ಬೆಂಗಳೂರು: ಸ್ಪರ್ಧಾ ವಿಜೇತ ಪ್ರಕಾಶನ.
4. ಹಾಲಪ್ಪ ಎನ್., (2010), ಸಾರ್ವಜನಿಕ ಆಡಳಿತ, ಎಂ.ಇ.ಎಸ್. ಗುರುಕುಲ ಪಬ್ಲಿಕೇಶನ್ಸ್.
5. ಮಧುಸೂದನ ಕೆ.ವಿ. ಮತ್ತು ಮಂಜಪ್ಪ ಸಿ.ಎನ್., (2006), ಮಾಹಿತಿ ಹಕ್ಕು ಅಧಿನಿಯಮ–2005, ಬೆಂಗಳೂರು: ಸಿರಿ ಸವಿ ಕನ್ನಡ ಕಾನೂನು ಪುಸ್ತಕ ಪ್ರಕಾಶನ.
6. ಶೇಖರ್ ಡಿ. ಸಜ್ಜನರ, (2019), ಮಾಹಿತಿ ಹಕ್ಕು ಅಧಿನಿಯಮ, 2005–ಒಂದು ವಿಶ್ಲೇಷಣೆ, ಗದಗು: ವಿಕ್ರಂ ಪ್ರಕಾಶನ.
7. Mukesh Sharma, Panchayati Raj System and Empowerment, Jaipur.
8. Ministry of Law and Justice (Government of India), (2005), The Right to Information Act, 2005, New Delhi: Ministry of Law and Justice.
9. Abhe Singh Yadav, (2008), Right to Information Act 2005: An Analysis, New Delhi: Central Law publications.
10. Harsha Mandar and Abha Singhal Joshi, (2001), The Movement for Right to Information in India: Peoples Power for the Control of Corruption, New Delhi: Commonwealth Human Rights initiative.